**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ. ಎಂ.ಎಫ್. ಸಿ, ಕನಕಪುರ**
**C.C. 2269.2022**

**CW2 PW1**

| | | |
|---|---|---|
| **ಹೆಸರು** | **:** | **ಗಿರೀಶ್** |
| **ತಂದೆಯ ಹೆಸರು** | **:** | **ದಾಸಯ್ಯ** |
| **ವಯಸ್ಸು** | **:** | **34** |
| **ಉದ್ಯೋಗ** | **:** | **ಖಾಸಗಿ ಕೆಲಸ** |
| **ವಾಸ** | **:** | **ಮೇಡನಹಳ್ಳಿ .** |

**ಸಾಕ್ಷಿ ಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ ದಿನಾಂಕ 12.06.2026.**

ನ್ಯಾಯಾಲಯ ಮುಂದಿರುವ ಆರೋಪಿತ ಗೊತ್ತು. ಚಾಸಾ-1 ನನ್ನ ತಾಯಿ , ಚಾಸಾ- 3 ರಿಂದ 6 ಗೊತ್ತು.

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ , ಆರೋಪಿಗಳು ನನ್ನ ಹೊಡೆದಿರುವುದಿಲ್ಲ , ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ , ಪ್ರಾಣ ಬೆದರಿಕೆ ಹಾಕಿರುವುದಿಲ್ಲ . ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

**ಪಾಟೀ ಸವಾಲು : ಎ ಪಿ ಪಿ ಯವರಿಂದಃ**

ದಿನಾಂಕಃ 05.06.2022 ರಂದು ಸಂಜೆ 4.30 ಗಂಟೆ ಸಮಯದಲ್ಲಿ ನೀವು ದೊಡ್ಡ ಮುದುವಾಡಿ , ಗೋಗಾರದೊಡ್ಡಿ ರಸ್ತೆಯ ಪಕ್ಕದಲ್ಲಿ ಇರುವ ಲೋಕೇಶ್ ರವರ ಖಾಲಿ ಸೈಟ್ ನಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಆರೋಪಿ ನಿಮ್ಮನ್ನು ಅಡ್ಡಗಟ್ಟಿ ಸೂಳೆ ಮಗನೇ ಇತರೆ ಅವಾಚ್ಯ ಶಬ್ದಗಳಿಂದ ಬೈದು , ಮಚ್ಚಿ ನಿಂದ ತಲೆಗೆ ಹೊಡೆದು ಪ್ರಾಣ ಬೆದರಿಕೆ ಹಾಕಿರುತ್ತಾರೆ , ನಿಮ್ಮ ತಲೆಯ ನೆತ್ತಿಯ ಮೇಲೆ ಏಟಾಗಿರುತ್ತದೆ , ಎಡಗೈ ತೋರು ಬೆರಳು ಮತ್ತು ಉಂಗುರದ ಬೆರಳಿಗೆ ಗಾಯಾಗಿರುತ್ತದೆ ಎಂದರೆ ಸರಿಯಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿಯ ಜೊತೆ ರಾಜೀ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಅವರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಇಲ್ಲ**
**ಮರು ವಿಚಾರಣೆ : ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ